# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ

## ಅಫಜಲಪೂರ

**ಸಿಸಿ ನಂ.283/2016**

**ಅಫಜಲಪುರ ಪೋಲಿಸ್ ಠಾಣೆ**

// ವಿರುದ್ಧ //

**ಪ್ರಮೋದ ಹಾಗೂ ಇತರರು**

## ಃದೋಷಾರೋಪಣೆಃ

1. ಪ್ರಮೋದ ತಂದೆ ಗುಂಡಾಚಾರ್ಯ ಮೋಗರೆ
   ವಃ45 ವರ್ಷ, ಉಃಗೌರ.ಬಿ ಗ್ರಾ.ಪಂ. ಅಭಿವೃದ್ದಿ ಅಧಿಕಾರಿ
   ಸಾ|| ಕರಜಗಿ, ತಾ|| ಅಫಜಲಪೂರ.

2. ರುದ್ರಗೌಡ ತಂದೆ ದೇವಿಂದ್ರಪ್ಪ ಪಾಟೀಲ
   ವಃ31 ವರ್ಷ, ಉಃಗೌರ.ಬಿ ಗ್ರಾ.ಪಂ.ಅಧ್ಯಕ್ಷ
   ಸಾ|| ಸೊನ್ನ, ತಾ|| ಅಫಜಲಪೂರ.

3. ರಮೇಶ ತಂದೆ ಗಾಂಧಿ ನಿಂಬರ್ಗಿ
   ವಃ27 ವರ್ಷ, ಉಃಗೌರ.ಬಿ ಗ್ರಾ.ಪಂ.ಕಂಪ್ಯೂಟರ ಆಪರೇಟರ
   ಸಾ|| ಗೌರ ಬಿ., ತಾ|| ಅಫಜಲಪೂರ.

4. ಉಮೇಶ ತಂದೆ ಕಲ್ಲಪ್ಪ ಕಂಬಾರ
   ವಃ42 ವರ್ಷ, ಉಃಕಂಟ್ರಾಕ್ಟರ
   ಸಾ|| ಅಳ್ಳಗಿ ಬಿ, ತಾ|| ಅಫಜಲಪೂರ.
   **(ಮೃತಪಟ್ಟಿರುತ್ತಾನೆ)**

5. ಬಸವರಾಜ ತಂದೆ ಸಿದ್ರಾಮ ಜಮಾದಾರ
   ವಃ25 ವರ್ಷ, ಉಃಕಂಟ್ರಾಕ್ಟರ
   ಸಾ|| ಕೆರಕನಳ್ಳಿ, ತಾ|| ಅಫಜಲಪೂರ.

6. ಅನೀಲಕುಮಾರ ತಂದೆ ಈಶ್ವರಪ್ಪ ಅಂಕಲಗಿ
   ವಃ25 ವರ್ಷ, ಉಃಕಂಟ್ರಾಕ್ಟರ
   ಸಾ|| ಸೊನ್ನ, ತಾ|| ಅಫಜಲಪೂರ.

7. ಸಂಗನಬಸಪ್ಪ ತಂದೆ ಈರಣ್ಣ ಸೊಡ್ಡಿ
ವಃ38 ವರ್ಷ, ಉಃಕಂಟ್ರಾಕ್ಟರ
ಸಾ|| ದೇವಣಗಾಂವ, ತಾ|| ಸಿಂದಗಿ

8. ಮಹಾಂತಗೌಡ ತಂದೆ ಗುರುಲಿಂಗಪ್ಪ ಪಾಟೀಲ
ವಃ35 ವರ್ಷ, ಉಃಕಂಟ್ರಾಕ್ಟರ
ಸಾ|| ದುದ್ದಣಗಿ, ತಾ|| ಅಫಜಲಪೂರ.

9. ಮಹಾಂತಯ್ಯ ತಂದೆ ಸಿದ್ದಯ್ಯ ಹಿರೇಮಠ
ವಃ38 ವರ್ಷ, ಉಃಕಂಟ್ರಾಕ್ಟರ
ಸಾ|| ಕರಜಗಿ, ತಾ|| ಅಫಜಲಪೂರ.

10. ಹಣಮಂತ ತಂದೆ ಸಿದ್ರಾಮ ಜಮಾದಾರ
ವಃ41 ವರ್ಷ, ಉಃಒಕ್ಕಲುತನ
ಸಾ|| ಅಫಜಲಪೂರ.

11. ಅಬ್ದುಲ ತಂದೆ ಯಾಕೂಬ ಅವಟಿ
ವಃ37 ವರ್ಷ, ಉಃಒಕ್ಕಲುತನ
ಸಾ|| ದೇವಣಗಾಂವ, ತಾ|| ಸಿಂದಗಿ

12. ವೀರಯ್ಯ ತಂದೆ ಪಾಲಯ್ಯ ಮಠಪತಿ
ವಃ27 ವರ್ಷ, ಉಃವಿದ್ಯಾರ್ಥಿ
ಸಾ|| ಬಸವೇಶ್ವರ ನಗರ, ಅಫಜಲಪೂರ.
ಆರೋಪಿತರಾದ ನಿಮ್ಮ ಮೇಲೆ....

ನಾನು **ಅಶೋಕ .ಟಿ**, ಬಿ.ಎ., ಎಲ್‌ಎಲ್‌ಬಿ, ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪುರ. ಆರೋಪಿಸುವುದೇನೆಂದರೆ,

ಮೊದಲನೇಯದಾಗಿ 1 ನೇ ಆರೋಪಿಯಾದ ನೀನು ಗೌರ(ಬಿ) ಗ್ರಾಮ ಪಂಚಾಯತಿಯ ಪಿ.ಡಿ.ಓ ಇದ್ದು, 2 ನೇ ಆರೋಪಿತನಾದ ನೀನು ಸದರಿ ಪಂಚಾಯತಿಯ ಅಧ್ಯಕ್ಷನಿದ್ದು, 3 ನೇ ಆರೋಪಿತನಾದ ನೀನು ಸದರಿ ಪಂಚಾಯತಿಯಿಯ ಕಂಪ್ಯೂಟರ್ ಆಪರೇಟರಿದ್ದು, 1 ರಿಂದ 3 ನೇ ಆರೋಪಿತರಾದ ನೀವು 4 ರಿಂದ 12 ಆರೋಪಿತರೊಂದಿಗೆ ಅಕ್ರಮವಾಗಿ ಕೂಡಿಕೊಂಡು ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಟ್ಟ ಗ್ರಾಮಗಳ (ನರೇಗಾ) ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೊಗ ಖಾತ್ರಿ ಯೋಜನೆಯಡಿಯಲ್ಲಿ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2013-14 ನೇ ಸಾಲಿನ 1) ಪರಿಷ್ಕೃತ ಕ್ರೀಯಾ ಯೋಜನೆಯ ಒಟ್ಟು 78 ಕಾಮಗಾರಿಗಳ

ಒಟ್ಟು ಮೊತ್ತ ರೂ.177.71/- ಲಕ್ಷ, 2) ಸಾರ್ವಜನಿಕ ಕ್ರಿಯಾ ಯೋಜನೆಯ ಒಟ್ಟು 73 ಕಾಮಗಾರಿಗಳ ಒಟ್ಟು ಮೊತ್ತ ರೂ.218/- ಲಕ್ಷ, 3) ಹೆಚ್ಚುವರಿ ವೈಯಕ್ತಿಕ ಕ್ರಿಯಾ ಯೋಜನೆಯ ಒಟ್ಟು 217 ಕಾಮಗಾರಿಗಳ ಒಟ್ಟು ಮೊತ್ತ ರೂ.166.75/- ಲಕ್ಷ ಹೀಗೆ ಒಟ್ಟು 368 ಕಾಮಗಾರಿಗಳ ಒಟ್ಟು ಮೊತ್ತ ರೂ.5,62,46,000/- ಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಜಿಲ್ಲಾ ಪಂಚಾಯಿತಿಯ ಮೇಲಾಧಿಕಾರಿಯಿಂದ ಅನುನೋದನೆ ಪಡೆಯದೇ ಹಾಗೂ ಆ ಬಗ್ಗೆ ಯಾವುದೇ ಮಾಹಿತಿಯನ್ನು ಕೀರ್ದಿ ಪುಸ್ತಕದಲ್ಲಿ ನಮೂದಿಸಿದೆ ಆ ಪೈಕಿ ಒಟ್ಟು 22 ಕಾಮಗಾರಿಗಳ ಕಡತದಲ್ಲಿ ಕೂಲಿ ಕಾರ್ಮಿಕ ಸಹಿ ಇಲ್ಲದೆ ಹಾಗೂ ಅವರ ಒಂದೇ ತರಹದ ಹೆಬ್ಬೆಟ್ಟಿನ ಸಹಿಯನ್ನು ನಮೂದಿಸಿ ಹಾಗೂ 5 ಕಾಮಗಾರಿಗಳ ಸಂಬಂಧಿಸಿದ ಒಟ್ಟು ರೂ.3,22,804/- ಗಳನ್ನು ಕಾರ್ಮಿಕರ ಸಹಿಗಳು ಇಲ್ಲದೆ ಹಾಗೂ ಅಫಜಲಪೂರದ ಕೃಷ್ಣಾ ಗ್ರಾಮೀಣಾ ಬ್ಯಾಂಕ್ ಖಾತೆ ನಂ.11020100007244 ನೇದ್ದರ ಮೂಲಕ ದಿ.1.4.2013 ರಿಂದ 22.11.2014 ರ ವರೆಗೆ ಒಟ್ಟು ರೂ.4,92,491/- ಗಳನ್ನು ಪಡೆದುಕೊಂಡು ದಾಖಲೆಗಳನ್ನು ನಿರ್ವಹಣೆ ಮಾಡಿದೇ ವೆಚ್ಚ ಮಾಡಿ 1 ರಿಂದ 3 ನೇ ಆರೋಪಿತರು 4 ರಿಂದ 12 ನೇ ಆರೋಪಿತರ ಬ್ಯಾಂಕ್ ಖಾತೆಗೆ ಆನ್‌ಲೈನ್ ಮುಖಾಂತರ ಹಣ ಸಂದಾಯ ಮಾಡಿ ನಂತರ ಸದರಿ ಬ್ಯಾಂಕ್‌ಗಳಿಂದ ಡ್ರಾ ಮಾಡಿಕೊಂಡು ಅವ್ಯವಹಾರ ಮಾಡಿ ಸರಕಾರ ಹಣ ರೂ.5,19,03,853/- ವನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಅಪರಾಧಿಕ ನಂಬಿಕೆ ದ್ರೋಹ ಎಸಗಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂ:409 ಸಹವಾಚಕ 149 ರಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ ಮೇಲ್ಕಂಡ ಸಮಯ ಹಾಗೂ ಸ್ಥಳದಲ್ಲಿ ಮೇಲೆ ವಿವರಿಸಿದಂತೆ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು

ಹೊಂದಿ ಮೇಲ್ಕಂಡ ವ್ಯವಹಾರಕ್ಕೆ ಸಂಬಂಧಿಸಿದಂತೆ ಎಂ.ಐ.ಎಸ್ ಪ್ರಕಾರ 2013-14 ಮತ್ತು 2014-15 ನೇ ಸಾಲಿನ 153 ಕಾಮಗಾರಿಗಳಿಗೆ ಕೂಲಿ ಮತ್ತು ಸಾಮಾಗ್ರಿಗಳಿಗಾಗಿ ಹಣ ಪಾವತಿಸಿದ್ದು 132 ಕಾಮಗಾರಿಗಳ ಬಗ್ಗೆ ಎಂ.ಐ.ಎಸ್ ನಲ್ಲಿ ನೋಂದಾಯಿಸಿದ್ದು ಅವುಗಳಲ್ಲಿ 110 ಕಾಮಗಾರಿಗಳ ಕಡತಗಳನ್ನು ಕಳ್ಳತನ ಮಾಡಿ ಅಪ್ರಾಮಾಣಿಕವಾಗಿ ಉಪಯೋಗಿಸಿಕೊಂಡು ಆ ಮೂಲಕ **ಭಾರತ ದಂಡ ಸಂಹಿತೆ ಕಲಂ:379 ಸಹವಾಚಕ 149 ರಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ ಮೇಲ್ಕಂಡ ಸಮಯ ಹಾಗೂ ಸ್ಥಳದಲ್ಲಿ ಮೇಲೆ ವಿವರಿಸಿದಂತೆ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ ಮೇಲ್ಕಂಡ ಮೇಲ್ಕಂಡ ನರೇಗಾ ಯೋಜನೆಗೆ ಸಂಬಂಧಿಸಿದಂತೆ **1** ರಿಂದ **3** ನೇ ಆರೋಪಿತರು **4** ರಿಂದ **12** ನೇ ಆರೋಪಿತರ ಬ್ಯಾಂಕ ಖಾತೆಗೆ ಮೇಲ್ಕಂಡಂತೆ ಅವ್ಯವಹಾರ ಮಾಡಿ ಹಣವನ್ನು ಆನ್ ಲೈನ್ ಮೂಲಕ ಸಂದಾಯ ಮಾಡಿ ನಂತರ ಸದರಿ ಹಣವನ್ನು ಬ್ಯಾಂಕ್ ಮೂಲಕ ಡ್ರಾ ಮಾಡಿ ಸರಕಾರಿ ಹಣವಾದ **ರೂ.5,19,03,853/-** ಹಣವನ್ನು ತಮ್ಮ ಸ್ವತಂಕ್ಕೆ ಉಪಯೋಗಿಸಿಕೊಂಡು ಸರಕಾರಕ್ಕೆ ಮೋಸ ಮಾಡಿ ವಂಚಿಸಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂ:420 ಸಹವಾಚಕ 149 ರಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ದಿನಾಂಕ:12.11.2019 ಜೆ.ಎಮ್.ಎಫ್.ಸಿ., ಅಫಜಲಪೂರ

**ಆರೋಪಿತರ ಹೇಳಿಕೆ**

ಪ್ರ-1 ನಿಮಗೆ ಮೇಲೆ ಓದಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವೀರಾ ಅಥವಾ ವಿಚಾರಣೆ ಬಯಸುತ್ತೀರಿ?
ಉಃ

ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆರೋಪಣೆಗಳನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರುಗಳು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ

ದಿನಾಂಕಃ12.11.2019 ಜೆ.ಎಮ್.ಎಫ್.ಸಿ., ಅಫಜಲಪೂರ